


International Journal of Kannada Research
www.kannadajournal.com

**ISSN: 2454–5813**
IJKR 2024; 10(2): 104-106
© 2024 IJKR
www.kannadajournal.com
Received: 23-01-2024
Accepted: 28-02-2024

**Dr. Raveendra Katti**
Assistant Professor,
Department of Kannada,
Shri S.R.Kanthi Arts,
Commerce and Science
College, Mudhol, Karnataka,
India

**Corresponding Author:**
**Dr. Raveendra Katti**
Assistant Professor,
Department of Kannada,
Shri S.R.Kanthi Arts,
Commerce and Science
College, Mudhol, Karnataka,
India

# ‘ರಸಗಂಗಾಧರ’ ಕೃತಿಯ ಪ್ರೇಮದ ದೃಷ್ಟಿ ಮತ್ತು ಸೃಷ್ಟಿಯ ಕೋನಗಳು

**Dr. Raveendra Katti**

**DOI:** https://doi.org/10.22271/24545813.2024.v10.i2b.972

**ಅಮೂರ್ತ**
ಸಾಹಿತ್ಯ ಲೋಕದಲ್ಲಿ ಈಗಾಗಲೇ ಪ್ರೊ.ವಿಕ್ರಮ ವಿಸಾಜಿರವರು– ತಮಾಷಾ, ಗೂಡು ಕಟ್ಟುವ ಚಿತ್ರ, ವಿಕ್ರಮ ವಿಸಾಜಿ ಕಥೆಗಳು, ಬಿಸಿಲ ಕಾಡಿನ ಹಣ್ಣು ಬೆಳಗಿನ ಮುಖ, ನಾದಗಳು ನುಡಿಯಾಗಲೇ, ಪಠ್ಯದ ಭವಾವಳಿ, ರಸಗಂಗಾಧರ, ರಕ್ತ ವಿಲಾಪ, ಕಂಬಾರರ ನಾಟಕಗಳು, ಮತ್ತೆ ಬಂತು ಶ್ರಾವಣ, ಗ್ರೀಕ್ ಹೊಸ ಕಾವ್ಯ, ಇಂದ್ರಸಭಾ, ಸಿಮೋನ್ ದ ಬೋವಾ– ಈ ರೀತಿಯ ಅನನ್ಯ ಕೃತಿಗಳ ಮೂಲಕ ಗುರುತಿಸಿಕೊಂಡಿದ್ದಾರೆ. ಇವರ ‘ರಸಗಂಗಾಧರ’ ಮತ್ತು ರಕ್ತವಿಲಾಪ ಎಂಬೆರಡು ಕೃತಿಗಳು ನಾಟಕ ಸಾಹಿತ್ಯಕ್ಕೆ ಸಂಬಂಧಿಸಿವೆ. ಇವರು ‘ರಸಗಂಗಾಧರ’ ಕೃತಿಯ ಮೂಲಕ ನಾಟಕ ಕ್ಷೇತ್ರವನ್ನು ಪ್ರವೇಶಿಸಿದವರು. ಈ ಕೃತಿಯ ಮೂಲಕ ಸಾಹಿತ್ಯಲೋಕಕ್ಕೆ ಪ್ರೇಮವೊಂದರ ಮಾದರಿಯನ್ನು ಪರಿಚಯಿಸುವ ಅವರ ಉತ್ಸಾಹ, ಹುಮ್ಮಸ್ಸು, ರಚನೆಗಳಲ್ಲಿ ಕಂಡುಬರುವ ವಾಕ್ ಚಾತುರ್ಯಗಳು ರಮ್ಯವಾಗಿಯೇ ಗುರುತಿಸಿಕೊಳ್ಳುತ್ತವೆ. ಇತಿಹಾಸದ ಕಥನವೊಂದರ ಭಾಗವಾಗಿ ನಿರೂಪಿತಗೊಳ್ಳುವ ಪ್ರೇಮವು– ಈ ಲೋಕದ ಸದ್ಯದ ಅನಿವಾರ್ಯತೆ ಮತ್ತು ಅಗತ್ಯತೆಗಳನ್ನು ಕುರಿತು ವಿವೇಚಿಸುತ್ತದೆ. ಈ ಲೋಕದ ಹಿಂಸೆಯ ಮಾದರಿಗಳು ಪ್ರೇಮವನ್ನು ತಿಕ್ಕುವ, ಹತ್ತಿಕ್ಕುವ ಕಾಲವೊಂದರ ಹಲವು ಪ್ರಯತ್ನಗಳನ್ನು ಈ ಕೃತಿಯಲ್ಲಿ ಅಡಕಗೊಳಿಸಲಾಗಿದೆ.

**ಮುಖ್ಯಸೂಚಿಪದಗಳು:** ಪ್ರೇಮ, ಹಿಂಸೆ, ರಸ, ರಮಣೀಯತೆ, ಅಧಿಕಾರ, ಲಾವಂಗಿ, ಜಗನ್ನಾಥ, ದಾರಾ, ಔರಂಗಜೇಬ

## ಪೀಠಿಕೆ

ಪ್ರೇಮವನ್ನು ತುಂಡರಿಸಿ, ಹಿಂಸೆಯನ್ನು ಕಂಡರಿಸಿದ ಇತಿಹಾಸವೆಂದರೆ ಅದು ಭಾರತದ್ದೇ ಇರಬೇಕು. ಇಲ್ಲಿ, ಹಿಂಸೆಯ ತೀವ್ರ ಮಿಡಿತದಲ್ಲಿಯೂ ಪ್ರೇಮದ ತುಡಿತವಿದೆ. ಇಲ್ಲಿಯ ಸಂಪತ್ತು, ಸಾರ್ವಭೌಮತ್ವದ ಕನಸ್ಸುಗಳು ಮೌಲ್ಯಗಳಿಗಿಂತ ಅಮಾಯಕರ ಮೇಲೆ ನಿಯಮಗಳ ಹೇರಿಕೆಯನ್ನೇ ಉದ್ದೀಪಿಸಿವೆ. ಡಾಂಭಿಕರ ಹಿಡಿತದಲ್ಲಿರುವ ಮೌಲ್ಯ(ಧರ್ಮ)ಗಳೇ ವಾಮ ನಿಯಮಗಳ ರಾಜಾಶ್ರಯ ಬೇಡಿದ್ದಿದೆ. ಇಂತವರ ಕೈಯಲ್ಲಿ ಧರ್ಮಗಳು ಅಧಿಕಾರ, ಸಂಪತ್ತು, ಪ್ರತಿಷ್ಠೆಗಳ ಪಾಲುದಾರಿಕೆಗಾಗಿಯೇ ಶ್ರಮಿಸುತ್ತಿವೆ. ಇಂತಹದ್ದೇ ವಿವೇಕಶೂನ್ಯ ವಾರಸುದಾರರ ಆವಾಂತರಗಳಿಂದ ‘ದೇಹಲಿ’ಯ ರಾಜಮನೆತನಗಳು ನಲುಗಿದ್ದೂ ಇವೆ. ಕೆಲವು ನೆನಪುಗಳು ಅಲಿಖಿತ ದಂತಕಥೆಗಳಾಗಿಯೇ ಉಳಿಯುವ ಹೊತ್ತಿಗೆ ಸಾಹಿತ್ಯದ ಸಖ್ಯ ಬೆಳೆಸಿಕೊಂಡಿದ್ದೂ ಇದೆ. ಅಂತಹದ್ದೊಂದು ಕರಾಳ ನೆನಪು– ಷಹಾಜಾನ, ಔರಂಗಜೇಬ, ಜಗನ್ನಾಥ ಪಂಡಿತ, ದಾರಾಶುಕೋ ರಂತಹ ಚಾರಿತ್ರಿಕ ಪುರುಷರನ್ನು ಒಳಗೊಂಡಿದೆ. ಎಷ್ಟೋ ಸಲ, ಚರಿತ್ರೆ ಮತ್ತು ದಂತಕಥೆಗಳು ಸಾಹಿತ್ಯದ ಮಧ್ಯಸ್ಥಿಕೆಯಲ್ಲಿ ಗ್ರಹಿಕೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ. ವರ್ತಮಾನದ ಅದೆಷ್ಟೋ ವಿಧ್ಯಮಾನಗಳನ್ನೂ ಆವರಿಸಿಕೊಂಡಿವೆ.

ಇತ್ತೀಚೆಗೆ ವರ್ತಮಾನದ ಆವರಣ ತೊಡಿಸಿ ಇತಿಹಾಸದ ನಿಷ್ಕೃಷ್ಟ ಪರಿಯೊಂದರ ಪುನರಾವಲೋಕನಕ್ಕೆ ಸಾಹಿತ್ಯಲೋಕವನ್ನು ಸಿದ್ಧಗೊಳಿಸಿದ ಕೃತಿಗಳಲ್ಲಿ ‘ರಾಕ್ಷಸ ತಂಗಡಗಿ’, ‘ಮಹಮೂದ್ ಗವಾನ್’, ‘ರಸಗಂಗಾಧರ’ ಕೃತಿಗಳೂ ವಿಮರ್ಶಾ ಲೋಕದಲ್ಲಿ ಸಣ್ಣಗೆ ಚರ್ಚೆಗೆ ಒಳಪಡುತ್ತಲೇ ಇವೆ. ಇಂತಹ ಚರ್ಚೆಗಳ ಪರೀಧಿಯೊಳಗೆ ಅಷ್ಟೇನೂ ಸಾಹಿತ್ಯಪ್ರಿಯರನ್ನು ಪ್ರಭಾವಿಸದ ರಚನೆಗಳು– ಪ್ರಚಾರ ಮತ್ತು ಪ್ರಭಾವಳಿಗಳನ್ನೇ ಸಾಧನವಾಗಿಸಿಕೊಂಡು ಚಿಂತನೆಯ ದಿಕ್ಕುಗಳಿಗೆ ಗೋಡೆ ಕಟ್ಟುವ ಪ್ರಯತ್ನಗಳು ನಡೆಯುತ್ತಲೇ ಇವೆ. ಈಗಾಗಲೇ ಸಾಹಿತ್ಯಲೋಕದಲ್ಲಿ ಅನನ್ಯತೆಯನ್ನು ಸಾಧಿಸಿದವರ ಇತ್ತೀಚಿನ

ರಚನೆಗಳು ಮಣ್ಣು ಮುಕ್ಕುತ್ತಿರುವ ಸಂದರ್ಭದಲ್ಲಿಯೇ ಪ್ರಭುದ್ಧತೆಯನ್ನೇ ಧ್ಯಾನಿಸುವ ಮತ್ತು ಅನನ್ಯತೆಯನ್ನು ಸಾಧಿಸುವ ಪ್ರಯತ್ನದಲ್ಲಿರುವ ನವನವೋನ್ಮೇಶ ಕೃತಿಗಳಲ್ಲಿಯೇ 'ರಸಗಂಗಾಧರ'ವು ಒಂದು ಚೊಚ್ಚಲು ಹೆರಿಗೆ. ರಸವನ್ನು ಗಂಗಾಧರನಲ್ಲಿಯೇ ಶೋಧಿಸುವ ವ್ಯಷ್ಠಿ ಪ್ರಜ್ಞೆಗೂ, ರಸ'ವನ್ನು ಲಿಂಗಾಧರನಲ್ಲಿಯೇ ಧ್ಯಾನಿಸುವ ಸಮಷ್ಠಿ ಪ್ರಜ್ಞೆಗೂ ನಡುವೆ ಅಂತರವಿದೆ. ಇಲ್ಲಿ, ಗಂಗಾಧರನೇ ಆಗಲಿ; ಲಿಂಗಾಧರನೇ ಆಗಲಿ ಪ್ರಧಾನವಲ್ಲ–ಇವೆರಡನ್ನೂ ಮೀರಿಸುವ ರಸದ ಕ್ರಮವೊಂದನ್ನು ಪ್ರೇಮದ ಶ್ರಮವ್ಯಯಿಸಿ 'ವಿಕ್ರಮ'ಗೊಳಿಸಿದ್ದಿದೆ.

'ತಲೆಯ ಮೇಲೆ ಕುಂಭವನ್ನು ಹೊತ್ತ ಈ ಪೀನಪಯೋಧರಿಯ ಹೊರತು ನಾನು ಆನೆ, ಕುದುರೆ, ಸಂಪತ್ತು–ಗಳನ್ನೆಂದೂ ಬಯಸುವುದಿಲ್ಲ' ಎಂಬರ್ಥದ ಜಗನ್ನಾಥನ ಸಂಸ್ಕೃತದ ಉಕ್ತಿಯಿಂದಲೇ ನಾಟಕವು ಪ್ರಾರಂಭಿಸಲ್ಪಟ್ಟಿದೆ. ಪದ್ಯದ ಕಣಕಣವೂ ಜಗನ್ನಾಥನ ಗ್ರಹಿಕೆಗಳಿಂದಲೇ ಆವರಿಸಿದ್ದರೂ ಅಂತಹ ಗ್ರಹಿಕೆಗಳೆಲ್ಲವೂ ಕಾವ್ಯದ ಸಹೃದಯಿ ಷಹಜಾನನ ವ್ಯಕ್ತಿತ್ವವನ್ನೇ ಪ್ರತಿಧ್ವನಿಸಿದಂತಿವೆ. ನಾಟಕದ ಪ್ರಾರಂಭದಲ್ಲಿಯೇ, ಷಹಜಾನನಿಗೂ ಇರಬಹುದಾದ ಕಾವ್ಯ, ಪ್ರೇಮದ ಹುಚ್ಚು ತೆರೆದುಕೊಂಡಿದೆ. ಷಹಜಾನನಿಗೆ ಚರಿತ್ರೆಯಲ್ಲಿರುವ ಅದೆಷ್ಟೋ 'ಹಾವಿನ ಹೆಳಿಗೆ'ಗಳದ್ದೇ ಭಯ. ಕಾವ್ಯವು ರೂಪಕಗಳ ಮೊಟ್ಟೆಯಲ್ಲಿ ಚರಿತ್ರೆಯನ್ನು ರಮಣೀಯವಾಗಿ ಕರಗಿಸುವುದರಿಂದ ಆತನಿಗೆ ತಡವರಿಸುವ ಚರಿತ್ರೆಯ ನಿರಸ ವರದಿಗಳಿಗಿಂತಲೂ ಕಾವ್ಯದ ಪ್ರತಿ ರಸವತ್ಪೂರ್ಣ ಹೆಣಿಗೆಯಲ್ಲಿಯೂ ಪ್ರೇಮವೇ ಕಾಣಿಸಿದೆ. ಮೊಗಲ್ ಸಾಮ್ರಾಟರು ಚರಿತ್ರೆ ಮತ್ತು ಪ್ರೇಮದಲ್ಲಿ ಅಡಗಿಸಿಟ್ಟ ಹಿಂಸಾ ತೀವ್ರತೆಯ ಆ ಹುಚ್ಚು ಲಾವಂಗಿಯ ಮೂಲಕ ಪ್ರಶ್ನಿಸಲ್ಪಟ್ಟಿದೆ. 'ಮೊಗಲ್ ಅಂತಃಪುರದ ಪ್ರೇಮಕಥೆಗಳ ವ್ಯಾಖ್ಯಾನ ನಿಮಗೆ ಸಾಧ್ಯವೇ?'[೧], 'ಈ ಜನಾನಾಗಳ ಹೆಂಗಸರ ಕಥೆ ಹತ್ತು ರಾಮಾಯಣ, ಮಹಾಭಾರತಗಳಿಗಾಗುವಷ್ಟು ಇದೆ'[೨], 'ದಿಲ್ಲಿಯ ದೊರೆಗಳಿಗೆ ಹೊಗಳಿಕೆ, ಪ್ರೇಮ, ರಕ್ತ, ಕದನ, ವಿಶ್ವಾಸದ್ರೋಹ, ವ್ಯೆಯ್ಯಾರ, ಹೆಣ್ಣಿನ ಮೊಲೆ, ಸೊಂಟ, ಯೋನಿ ಎಲ್ಲವೂ ಇಷ್ಟ'[೩]. ಹೀಗೆ, ಹೆಣ್ಣಾದವಳು ಪ್ರೇಮದ ಹೆಸರಿನಲ್ಲಿ ಮರೆಮಾಚಿದ ಮತ್ತು ಸಹಿಸಿಕೊಂಡ ಇತಿಹಾಸದ ಕಹಿಸತ್ಯಗಳನ್ನು ಅಣಕಿಸುವಂತಿವೆ.

ಇಲ್ಲಿ, 'ದೇಹಲಿ'ಯ ಆಡಳಿತವೆಂದರೆ ಪ್ರೇಮದ ಅಂತಃಸತ್ವವನ್ನೇ ಮಾರಿಕೊಂಡವರ ಅವಸ್ಥೆಯಾಗಿದೆ. ಷಹಜಾನನು ಪ್ರೇಮವೊಂದರ ಪ್ರತಿನಿಧಿ ಅಷ್ಟೇ ಆಗಿಲ್ಲ. ಪ್ರಭುತ್ವದ ಮೂಲಕ ಪ್ರಣಯದಲ್ಲಿ ಸಲುಹಿದ ಹಿಂಸೆಯ ಚಿಗುರುವಿಕೆಯನ್ನೂ ಧ್ವನಿಸುವನು. ಅಧಿಕಾರ, ವ್ಯಾಮೋಹಗಳಿಂದ ಆವರಿಸಿದ ಪ್ರಣಯ ಪ್ರೇಮದ ಸಂಕೀರ್ಣತೆಯು ಷಹಜಾನನಿಂದ ಸೂಚಿಸಲ್ಪಟ್ಟು ತನ್ನ ಮಕ್ಕಳ ಮೂಲಕ ಕವಲೊಡೆದಿದೆ. ಔರಂಗಜೇಬನಲ್ಲಿ– ಖಡ್ಗದ ಮೂಲಕ ಸಾಧಿಸಬಹುದಾದ ಅಧಿಕಾರದ (ವ್ಯಾಮೋಹ) ಪ್ರೇಮ, ಲಾವಂಗಿಯಲ್ಲಿ ಸಲಿಗೆ, ಆಕರ್ಷಣೆ ಬಾಧ್ಯತೆಯ ಮೂಲಕ ಸೂಚಿಸಬಹುದಾದ ದೇಹಪ್ರೇಮ, ದಾರಾಷುಕೋನ ಅನುಭೂತಿಯಲ್ಲಿಯೇ ಮುಳುಗಿ ಸಿದ್ಧಿಸಿಕೊಳ್ಳಬಹುದಾದ ಅಧ್ಯಾತ್ಮಪ್ರೇಮ–ವಾಗಿ ವೃದ್ಧಿಸಿದೆ. ಈತನಿಗೆ 'ಪ್ರೇಮದ ಅಮಲೇ ಭಕ್ತಿ'[೪]ಯಾಗಿ ಪರಿಣಮಿಸಿದೆ. ರಮಣೀಯತೆಯಲ್ಲಿಯೇ ಎಲ್ಲ ತರಹದ ರಸ ಇಲ್ಲವೆ ಪ್ರೇಮವನ್ನು ಗುರುತಿಸಬೇಕೆಂದು ಉಪದೇಶಿಸಿದ ಜಗನ್ನಾಥನ ಬದುಕಿನಲ್ಲಿಯೂ ಪ್ರೇಮದ ಹೃದಯವಿದ್ರಾವಕ ರಮಣೀಯ ಸಂದರ್ಭವು ಒದಗಿದ್ದಿದೆ. ಎಚ್ಚರ, ನಿದ್ರೆ– ಈ ಎರಡು ಸ್ಥಿತಿಗಳಲ್ಲಿಯೇ ವ್ಯವಹರಿಸುವ ಔರಂಗಜೇಬ, ಇವೆರಡನ್ನೂ ಮೀರಿದ ಮಗದೊಂದು ಸ್ಥಿತಿಯನ್ನು ಸಿದ್ಧಿಸಿಕೊಂಡಿರುವ ದಾರಾಷುಕೋ– ಈ ಇಬ್ಬರ ನಡತೆಗಳಲ್ಲಿ ಭಿನ್ನತೆಗಳಿವೆ. ಈ ಇಬ್ಬರನ್ನೂ ವಿಮರ್ಶಿಸುವ ಲಾವಂಗಿಯಲ್ಲಿಯೂ ಅಂತಹದ್ದೊಂದು ಮೂರನೇ ಸ್ಥಿತಿಯು ಸಿದ್ಧಿಸಿಲ್ಲ. ಅನುಭೂತಿಗಿಂತ ಓದಿನ ಅನುಭವದ ಬಲದಲ್ಲಿಯೇ ಅವಳ ನಡವಳಿಕೆ ಇದೆ. ಅಧ್ಯಾತ್ಮ ರಮಣೀಯತೆಯನ್ನು ಆಸ್ವಾದಿಸುತ್ತಿರುವ ಏಕಮಾತ್ರ ವ್ಯಕ್ತಿ– ದಾರಾಷುಕೋ. ಈ ಅರಿವು ಲಾವಂಗಿಗೂ ಇದ್ದಂತಿದೆ. ದಾರಾಷುಕೊ– ನ ನಡಾವಳಿಗಳಲ್ಲಿ 'ಅಧ್ಯಾತ್ಮ ರಮಣೀಯತೆ'ಯು ಸೂಚಿಸಲ್ಪಟ್ಟಿದೆ. ಎಲ್ಲ ಸಂಬಂಧಗಳ ಜೊತೆಗಿನ ತನ್ನ ಲೌಕಿಕ ವ್ಯವಹಾರವು ಅಷ್ಟಕಷ್ಟೇ. ತನ್ನ ಸುತ್ತಲಿನ ಕ್ರಿಯೆಗಳನ್ನು ಕ್ರಿಯೆಗಳಂತೆಯೇ ಗ್ರಹಿಸಿದ್ದಿದೆ; ಆದರೆ ಪ್ರತಿಕ್ರಿಯಿಸುವಲ್ಲಿ ವಿನಮ್ರತೆ ಮತ್ತು ವಿವೇಕವು ತೆರೆದುಕೊಂಡಿದೆ.

ನಾಟಕ ರಚನಾಕಾರರಿಗೆ ಅನುಭಾವವೇ ಆಗಲಿ, ಅಧ್ಯಾತ್ಮವೇ ಆಗಲಿ, ಲೋಕದ ಆಚೆಗೆ ಎಲ್ಲೋ ಇರುವಂತೆ ಭಾಸವಾಗಿಲ್ಲ. ಅದು ಗ್ರಹಿಕೆಯ ಗರಿಷ್ಠ ನಿರ್ಲಿಪ್ತತೆಗೆ ಸಂಬಂಧಿಸಿದ್ದಾಗಿದೆ. ಅದಕ್ಕಾಗಿಯೇ, 'ದಾರಾಷುಕೋ ಒಬ್ಬನೇ ಈ ಲೋಕದ ನಿಜವಾದ ಅರಸ'[೫] ಎಂದದ್ದಿದೆ. ಈ ಕೃತಿಯು ರಮಣೀಯತೆಯು ಎಷ್ಟೋ ಕವಲುಗಳನ್ನು ಸೂಚಿಸಿದರೂ 'ಔಚಿತ್ಯ ರಮಣೀಯತೆ' ಮತ್ತು 'ಔಚಿತ್ಯಾತೀತ ರಮಣೀಯತೆ'– ಈ ಎರಡರಲ್ಲಿಯೇ ಮೊಳಕೆಯೊಡೆದಿವೆ. ನಂಬಿಕೆಯೊಂದನ್ನು ನಾಟಕೀಕರಿಸುವಲ್ಲಿ 'ಆತ್ಮ'ದ ಪರಿಕಲ್ಪನೆಯನ್ನು ಉದ್ಧರಿಸಿದ್ದಿದೆ. ಇಲ್ಲಿ, ಕಾವ್ಯದ ಮೂಲಕ 'ಅಲ್ಲಾಹ'ನನ್ನು ಮುಟ್ಟುವುದು ಎಂದರೆ ದೇಹವು ಸಂಬಂಧಗಳ ಮೂಲಕ ಸಾಧಿಸುವ ಮತ್ತು ಆಸ್ವಾದಿಸುವ ರಮಣೀಯತೆಗೆ ಸಂಬಂಧಿಸಿರಬೇಕು. ಇಲ್ಲವಾದಲ್ಲಿ, ನಂಬಿಕೆಯೊಂದನ್ನು ಸೃಜನಕ್ರಿಯೆಗೆ ಒಳಪಡಿಸದೇ ಪಸರಿಸಿದರೆ ಅದು ಯಾವುದೋ ಕಾಲದ ಸಂಕುಚಿತ ಸತ್ಯದ ಗ್ರಹಿಕೆಯಾಗಿ ಉಳಿದುಬಿಡುತ್ತದೆ. ಸೃಜನಶೀಲತೆಯು ಅಸತ್ಯವಲ್ಲ; ಅದು ಯಾವುದೋ ಕಾಲದ ಸತ್ಯದ ಆವರಣವನ್ನು ಈ ಕಾಲದ ಗ್ರಹಿಕೆಗಳೊಂದಿಗೆ ಸ್ಪಂಧಿಸುವುದೂ ಆಗಿದೆ.

ತಾರುಣ್ಯದ ಪ್ರಣಯ ಪ್ರಜ್ಞೆಯನ್ನೇ ಪ್ರೇಮವೆಂದು ನಿರೂಪಿಸುವವರ ಮಧ್ಯದಲ್ಲಿಯೇ ಪ್ರೇಮದ ವೈವಿಧ್ಯತೆಯನ್ನು ಪರಿಶೋಧಿಸಿದ್ದು ವಿರಳ. ಪ್ರೇಮವೆಂದರೆ ಯಾವುದು ? ಅದು ಪ್ರಣಯವೇ? ಅಧಿಕಾರವೇ? ಪ್ರೇಮದ ನಿರೂಪಣೆಯಲ್ಲಿ ಜಿಡ್ಡುಗಟ್ಟಿದ ಪ್ರಣಯವೊಂದನ್ನೇ ಧ್ಯಾನಿಸದೆ ರಸ, ಕಾವ್ಯ, ಅಧಿಕಾರ, ಧರ್ಮ, ಪ್ರಭುತ್ವ–ಗಳ ವಿಕಾರ, ವಿಸ್ಮಯ ಮೋಹಗಳನ್ನೂ ಒಳಗಾಗಿಸಿಕೊಂಡದ್ದಿದೆ. ಪ್ರೇಮ ಮತ್ತು ಧರ್ಮಪ್ರಜ್ಞೆಗಳ ನಡುವೆ ಅನಿಶ್ಚಿತ ಇಲ್ಲವೆ ಅನಿವಾರ್ಯ ಸ್ಪರ್ಧೆ ಏರ್ಪಟ್ಟರೆ ಪ್ರಭುತ್ವದ ಒಪ್ಪಿತ ಧರ್ಮಕೇಂದ್ರಿತ ಪ್ರೇಮವನ್ನು ಎದುರಿಸುವ ಶಕ್ತಿ ಇನ್ನುಳಿದ ಪ್ರೇಮದ ಯಾವ ವರ್ಗಗಳಿಗೂ ಇಲ್ಲದಿರುವುದು ನಿರೂಪಿಸಲ್ಪಟ್ಟಿದೆ. ಪರಂಪರೆಯು ಪ್ರತಿಪಾದಿಸುವ ಧರ್ಮಕ್ಕಿಂತ ಪರಿಸರವು ಮೂಡಿಸುವ ಸಹಜವೂ ಸಂಮೃದ್ಧವೂ ಆದ ದೇಹಪ್ರೇಮವು ಕೆಲವರಿಗೆ ಹಿತವಾಗುವುದೇ ಇಲ್ಲ. ಅಧಿಕಾರ ಸ್ಥಾನದಲ್ಲಿರುವ ಧರ್ಮಕ್ಕೂ ಮತ್ತು ಅಧೀನ ಸ್ಥಾನದಲ್ಲಿರುವ ಧರ್ಮಕ್ಕೂ ನಡುವಿನ ತಿಕ್ಕಾಟದಲ್ಲಿ ಮನುಷ್ಯಪ್ರೇಮವು ಸೊರಗಿದ್ದಿದೆ. ವರ್ತಮಾನಕ್ಕೂ ಇಲ್ಲಿ ಕನ್ನಡಿ ಹಿಡಿದಂತಿದೆ. ಧರ್ಮಗಳು ಪ್ರಭುತ್ವದ ಮೂಲಕ ಈಗಲೂ ಅಧಿಕಾರವನ್ನು ಅನುಭವಿಸಲು ತಂತ್ರ ಹೂಡುತ್ತಿವೆಯೇ ಹೊರತು ಮನುಷ್ಯ ಪ್ರೇಮವನ್ನು ಸಿದ್ಧವಾಗಿಸುತ್ತಲೇ ಇಲ್ಲ ಎಂಬ ವಿಶಾದವು ಇಲ್ಲಿದೆ.

ಕಾವ್ಯಪ್ರೇಮವು ಕಾಲ ಕಾಲಕ್ಕೂ ನಿರಂಕುಶ ಪ್ರಭುತ್ವವನ್ನು ಪ್ರತಿಭಟಿಸಿದರೆ, ಪ್ರಭುತ್ವವು ಕಾವ್ಯದ ಪ್ರೇಮವನ್ನು ಪ್ರತಿಬಂಧಿಸುವುದರಲ್ಲೇ ನಿರತವಾಗಿದೆ. ಕಾವ್ಯವು ಯಾವ ಪ್ರೇಮವನ್ನೂ ಹಂಗಿಸುವುದಿಲ್ಲ; ರಸಾನುಭೂತಿಯಲ್ಲಿಯೇ ಪ್ರಕಟಗೊಳ್ಳುವುದು. ರಸವು ಯಾವುದೇ ಕಾಯ ಇಲ್ಲವೆ ಕಾವ್ಯವನ್ನೇ ಪ್ರವೇಶಿಸಿ ಪ್ರಕಟಗೊಂಡರೂ ಅದು ಪ್ರೇಮದ ದರ್ಶನವೇ ಆಗುವುದು. ಅಸಲು, ಪ್ರೇಮಕ್ಕೆ ಒಂದು ನಿರ್ದಿಷ್ಟ ವ್ಯಾಖ್ಯಾನವಿಲ್ಲ.

ಅದೊಂದು ಅನುಭೂತಿಯ ವಿಚಾರ. ಇಲ್ಲಿ, ರಸಕ್ಕೂ ಪ್ರೇಮಕ್ಕೂ ಯಾವುದೇ ಅರ್ಥಬೇಧಗಳಿಲ್ಲ[೬]. ಇದು ರಸದ ಗಂಗೆಯನ್ನೇ ಧರಿಸಿದ 'ರಸಗಂಗಾಧರ' ಕೃತಿ. ಇಲ್ಲಿಯೂ ರಸವಿದೆ; ಗಂಗಾಧರನಿಲ್ಲ, ಅಷ್ಟೇ. ಪ್ರೇಮ, ಸೌಂದರ್ಯ, ರಸ, ರಮಣೀಯತೆ– ಇಂತಹ ಶಬ್ದಗಳ ಅರ್ಥ ಪ್ರತಿಪಾದನೆಯಲ್ಲಿ ವಿಧಾನಗಳಿದ್ದರೂ ಅರ್ಥದ ಸಂಗಮಬಿಂದು ಒಂದೇ ಆಗಿದೆ. ಇಲ್ಲಿ 'ರಮಣೀಯ'ವಾದ ಅರ್ಥವನ್ನು ಪ್ರತಿಪಾದಿಸುವ ಶಬ್ಧವು ಕಾವ್ಯವಾಗಿ ಅಷ್ಟೇ ಉಳಿದಿಲ್ಲ. ಅದು ಪ್ರೇಮವೂ ರಸಸೌಂದರ್ಯವೂ ಆಗಿ ವ್ಯಾಪಿಸಿಕೊಂಡಿದೆ. ಶಬ್ದದ ಪ್ರೇಮವೂ ಸೌಂದರ್ಯವೂ ಕಳಿತು ರಸವತ್ತಾಗಿದೆ. ಲಾವಂಗಿ, ಜಗನ್ನಾಥ, ಔರಂಗಜೇಬ–ರ ಚಿತ್ತದ ಆವರಣಗಳು ಭಗ್ನಗೊಂಡು ವಿಭಿನ್ನ ರಸಗಳನ್ನು ಉತ್ಪತ್ತಿಯಾಗಿಸಿವೆ[೭]. ವಿರಹವೆಂದರೆ ಬರೀ ಪದಗಳ ಸಮುಚ್ಛಯವಾಗಿ ಉಳಿದಿಲ್ಲ; ಪ್ರಣಯ ಮತ್ತು ಪ್ರಳಯದ ಒಮ್ಮುಗಿಲ ಕಾವ್ಯವಾಗಿದೆ. ಪ್ರೇಮವು ಬರೀ ವೇದನೆಯಲ್ಲ; ಎರಡು ವ್ಯಕ್ತಿತ್ವಗಳ ಸಂವೇದನೆಯೂ ಆಗಿದೆ. ಅಲ್ಲಿ, ಕುಶಿ, ದುಃಖ, ವಿರಹ, ಉನ್ಮಾದಗಳಷ್ಟೇ ಅಲ್ಲ; ನೀಚತನವೂ ಇದೆ.

ಈ ಕೃತಿಗೆ ಇನ್ನೊಂದು ಆಯಾಮವೂ ಇದೆ. ಅದು ಪ್ರೇಮವು ರೋಗವಾಗುವ ಪರಿಯೊಂದರ ಚಿತ್ರಣ. ಸಲಿಗೆ, ಬಧ್ಧತೆ, ಭಾವೋದ್ವೇಗಗಳಲ್ಲಿ ಏರಿಳಿತಗಳಾದರೆ ಪ್ರೇಮಕ್ಕೆ ರೋಗ ತಗುಲುವುದು. ಜಗನ್ನಾಥನು ಇನ್ನಿಲ್ಲದ ಸ್ಥಿತಿಯಲ್ಲಿ ಲಾವಂಗಿಯ ಪ್ರಣಯ ಪ್ರಜ್ಞೆಯೇ ತುಂಡರಿಸಿ ಕಾವ್ಯದ ಮುಸುಕಿನಲ್ಲಿ ವಿಶಾದದ ಭಾವತರಂಗಗಳು ಪ್ರಕಟಗೊಂಡಿವೆ. ಇವು ಅವಳ ಪ್ರೇಮದ ಅಪಸಾಮಾನ್ಯತೆಯನ್ನೇ ಸೂಚಿಸುವವು. ಅವಳಿಗೆ ಸಂಗತವಾದದ್ದರಲ್ಲಿ ಮತ್ತು ಅದರ ಅತೀತತೆಯಲ್ಲಿ ಪ್ರೇಮವೂ, ಅಸಂಗತವಾದದ್ದರಲ್ಲಿ ರೋಗವೂ ಉದ್ಭವಿಸಿದ್ದಿದೆ. ದಾರಾಷುಕೋನನ್ನು ಬಿಟ್ಟರೆ ಜಗನ್ನಾಥನೂ ಇದಕ್ಕೆ ಹೊರತಲ್ಲ. ಇಲ್ಲಂತೂ 'ದಾರಾ' ಆರೋಗ್ಯವಂತನಂತೆ ಭಾಸವಾಗುವುದಿದೆ.

**ಅಡಿಟಿಪ್ಪಣಿ**

೧. ರಸಗಂಗಾಧರ–ಪ್ರೊ.ವಿಕ್ರಮ ವಿಸಾಜಿ, ದೃಶ್ಯ–ಒಂದು,
೨. ರಸಗಂಗಾಧರ–ಪ್ರೊ.ವಿಕ್ರಮ ವಿಸಾಜಿ, ದೃಶ್ಯ–ಒಂದು,
೩. ರಸಗಂಗಾಧರ–ಪ್ರೊ.ವಿಕ್ರಮ ವಿಸಾಜಿ, ದೃಶ್ಯ–ಎರಡು,
೪. ರಸಗಂಗಾಧರ–ಪ್ರೊ.ವಿಕ್ರಮ ವಿಸಾಜಿ, ದೃಶ್ಯ–ಎರಡು
೫. ರಸಗಂಗಾಧರ–ಪ್ರೊ.ವಿಕ್ರಮ ವಿಸಾಜಿ, ದೃಶ್ಯ–ಆರು,
೬. ಕಲಾ ಸಿದ್ಧಾಂತ, ರಸ ಉತ್ಪತ್ತಿ–ಡಾ.ವಿ.ಕೃ.ಗೋಕಾಕ, ಪು.೧೧೧ "ಸೃಷ್ಟಿಯ ಆನಂದದೊಡನೆ ಸಾಮರಸ್ಯ ಬೆಳೆಸುವುದಕ್ಕೆ ಆಸ್ವಾದವೆಂದು ಅಭಿನವಗುಪ್ತನು ಹೆಸರಿಟ್ಟು ಅದೇ ರಸಾನುಭೂತಿಯೆಂದು ಹೇಳಿದನು. ಭೋಜನು ಅದಕ್ಕೆ ಪ್ರೇಮವೆಂದು ಕರೆದ."
೭. ಕಲಾ ಸಿದ್ಧಾಂತ, ರಸ ಉತ್ಪತ್ತಿ–ಡಾ.ವಿ.ಕೃ.ಗೋಕಾಕ, ಪು.೧೦೭ 'ಭಗ್ನಾವರಣಾ ಚಿದೇವ ರಸಃ'– ಜಗನ್ನಾಥ